ಅಧಿಕಾರ ಪ್ರತ್ಯಾಯೋಜನೆಯು :

ಜವಳಿ, ಆಯುಕ್ತರು, ಸಕ್ಕರೆ ನಿರ್ದೇಶಕರು, ಅಪರ ನಿರ್ದೇಶಕರು (ಕೈಗಾರಿಕೆ ಮತ್ತು ವಾಣಿಜ್ಯ) ಹಾಗೂ ಪದನಿಮಿತ್ತ ಅಪರ ನಿಬಂಧಕರು, ಕೈಗಾರಿಕಾ ಸಹಕಾರ ಸಂಘಗಳು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಇರುತ್ತದೆ.

ಅಪರ ನಿರ್ದೇಶಕರು - ಕೈಗಾರಿಕೆ ಮತ್ತು ಮಾರಾಟ) ಹಾಗೂ ಪದನಿಮಿತ್ತ ಅಪರ ನಿಬಂಧಕರು ಕೈಗಾರಿಕಾ ಸಹಕಾರ ಸಂಘಗಳು	ಖಾದಿ ಮತ್ತು ಗ್ರಾಮೋದ್ಯೋಗ ಹ್ಯಾಂಡಿಕ್ರಾಫ್ಟ್ಸ್ ಸಹಕಾರ ಸಂಘಗಳು ಹಾರ್ಟಿಜನ್ ಸಹಕಾರ ಸಂಘಗಳು, ಬೇಡಿ ಕಾರ್ಮಿಕರ ಸಹಕಾರ ಸಂಘಗಳು ಮತ್ತು ಕಾಯರ್ ಸಹಕಾರ ಸಂಘಗಳು
ಜವಳಿ ಆಯುಕ್ತರು -	ನೂಲಿನ ಗಿರಣಿಗಳು ಮತ್ತು ನೇಕಾರರ ಸಹಕಾರ ಸಂಘಗಳು
ಸಕ್ಕರೆ ನಿರ್ದೇಶಕರು -	ಸಹಕಾರ ಸಕ್ಕರೆ ಕಾರ್ಖಾನೆಗಳು

ಮೇಲೆ ವಿವರಿಸಿರುವ ಸಹಕಾರ ಸಂಘಗಳನ್ನು ಹೊರತುಪಡಿಸಿ, 553 (ಐದು ನೂರು ಐವತ್ತಮೂರು) ಸಹಕಾರ ಸಂಘಗಳು ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಮುಂದುವರಿದಿವೆ.

ಪ್ರಶ್ನೆ 'ಇ' ನಲ್ಲಿ ಈಗಾಗಲೇ ಬೇರೆ ಬೇರೆ ಅಧಿಕಾರಿಗಳಿಗೆ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಬಂಧನೆಗಳನ್ನು ಅಧಿಕಾರ ಪ್ರತ್ಯಾಯೋಜನೆ ಮಾಡಿರುವುದನ್ನು ವಿವರಿಸಲಾಗಿದೆ.

ವಿವರಿಸಿರುವ ಸಂಘಗಳನ್ನು ಹೊರತುಪಡಿಸಿ, ಇತರೆ ಸಹಕಾರ ಸಂಘಗಳು ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿಯೇ ಉಳಿದುಕೊಂಡಿದೆ. ಹೀಗೆ ಉಳಿದುಕೊಂಡಿರುವ ಸಂಘಗಳ ಪೈಕಿ ದಾವಣಗೆರೆ ಆಟೋಮೊಬೈಲ್ ಕೈಗಾರಿಕಾ ಸಹಕಾರ ಸಂಘ ಒಂದು.

ಈ ಸಂಘದ ಆಡಳಿತ ಮಂಡಳಿಯನ್ನು ಸಹಕಾರ ಸಂಘಗಳ ಕಾಯ್ದೆ ಕಲಂ 30 ಎ ಪ್ರಕಾರ ರದ್ದುಪಡಿಸಿ ವಿಶೇಷಾಧಿಕಾರಿಯನ್ನು ನೇಮಿಸಿದ್ದಾಗ, ಈ ಸಂಘದ ಕಾರ್ಯ ಚಟುವಟಿಕೆಗಳನ್ನು ನೋಡಿಕೊಳ್ಳಲು ಇಲಾಖೆಯ ಸಹಕಾರಿ ಅಭಿವೃದ್ಧಿ ಅಧಿಕಾರಿಯ ಶ್ರೇಣಿಯ ಒಬ್ಬರನ್ನು ಈ ಸಂಘದ ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಲಾಗಿತ್ತು. ಈಗ ದಿನಾಂಕ 23-8-94 ರಿಂದ ದಾವಣಗೆರೆ ಒಂದನೇ ವೃತ್ತದ ಸಹಕಾರಿ ವಿಸ್ತರಣಾಧಿಕಾರಿಯವರನ್ನು ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಆಡಳಿತ ಮಂಡಳಿ ಚುನಾವಣೆಯಾದ ನಂತರವೂ ಈ ವ್ಯವಸ್ಥೆ ಮುಂದುವರಿದಿದೆ.

ಗೋಕಾಕ್ ತಾಲ್ಲೂಕಿನಲ್ಲಿ ಕಂದಾಯ ಪಡ ಜಮೀನಿನ ಪರಭಾರೆ,

2059 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ ನಗರ ಹಾಗೂ ತಾಲ್ಲೂಕಿನಲ್ಲಿರುವ ಒಟ್ಟು ಕಂದಾಯ ಪಡಾ ಜಮೀನು ಎಷ್ಟು?

ಆ) ಗೋಕಾಕ ನಗರದಲ್ಲಿರುವ ಕಂದಾಯ ನಿರುಪಯೋಗಿ ಜಮೀನನ್ನು 1995 ಜನವರಿಯಿಂದ ಪರಭಾರೆ ಮಾಡಿದ ಒಟ್ಟು ಜಮೀನು ಎಷ್ಟು.

ಇ) ಗೋಕಾಕ ನಗರದ ಕಾಲೇಜೊಂದಕ್ಕೆ ಹೊಂದಿಕೊಂಡಂತೆ ಇರುವ 9 ಎಕರೆ 15 ಗುಂಟೆ ಜಮೀನನ್ನು ಶಿಕ್ಷಣ ಸಂಸ್ಥೆಗೆ ವಹಿಸಿಕೊಟ್ಟದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಸದರೀ ಜಮಿನನ್ನು ಇಷ್ಟು ದೊಡ್ಡ ಮೊತ್ತದಲ್ಲಿ ಒಮ್ಮೆಲೇ ಒಂದು ಸಂಸ್ಥೆಗೆ ನೀಡಲು ತಹಶೀಲ್ದಾರರಿಗೆ ಅಧಿಕಾರವಿದೆಯೇ.

ಉ) ಸರ್ಕಾರದ ಅನೇಕ ಕಛೇರಿಗಳಿಗೆ ಸ್ಥಳ ಒದಗಿಸಲು ಸ್ಥಳ ಇಲ್ಲದಿರುವಾಗ ಹೀಗೆ ಒದಗಿಸಿದ್ದು ನ್ಯಾಯವೇ?

ಊ) ಈ ವಿಷಯದಲ್ಲಿ ಜಮೀನನ್ನು ಶಿಕ್ಷಣ ಸಂಸ್ಥೆಗೆ ಮಂಜೂರು ಮಾಡಲು ಸರ್ಕಾರ ಆದೇಶ ವಿತ್ತಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಗೋಕಾಕ ನಗರ ಹಾಗೂ ತಾಲ್ಲೂಕಿನಲ್ಲಿ ಯಾವುದೇ ಕಂದಾಯ ಪಡ ಜಮೀನು ಇರುವುದಿಲ್ಲ.

ಆ) ಜನವರಿ 1995ರಿಂದ ಯಾವುದೇ ಕಂದಾಯ ನಿರುಪಯೋಗಿ ಪಡ ಜಮೀನನ್ನು ಮಂಜೂರು ಮಾಡಿರುವುದಿಲ್ಲ.

ಇ) ಯಾವುದೇ ಶಿಕ್ಷಣ ಸಂಸ್ಥೆಗೆ ಜಮೀನು ಮಂಜೂರು ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಗೋಕಾಕ್ ತಾಲ್ಲೂಕಿನಲ್ಲಿ ಬಸ್ಸಿನ ಸೌಕರ್ಯ ಕುರಿತು

2060 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ಡಿಪೋದಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಓಡುತ್ತಿರುವ ಮತ್ತು ರಿಪೇರಿಗೆ ಒಳಪಟ್ಟ ಬಸ್ಸುಗಳ ಸಂಖ್ಯೆ ಎಷ್ಟು?

ಇ) ಗೋಕಾಕ ತಾಲ್ಲೂಕಿನ ಗುಜನಾಳ ಗಡನೆಲಗಂಟಿ ಕಡಬಗಟ್ಟಿ ಮುಂತಾದ ಹಳ್ಳಿಗಳಿಗೆ ಬ್ರಿಟೀಷರ ಕಾಲದಿಂದ ಇದುವರೆಗೆ ಬಸ್‌ನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂಡಿದೆಯೇ.

ಈ) ಹಾಗಾದರೆ ಒಳ ಪ್ರದೇಶವಾದ 8 ರಿಂದ 10 ಕಿ.ಮೀ ಒಳಗಿರುವ ಸದರಿ ಹಳ್ಳಿಗಳಿಗೆ ಬಸ್‌ನ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಗೋಕಾಕ ನಗರದಿಂದ ಬಸ್ ನಿಲ್ದಾಣವನ್ನು ನಗರದ ಹೊರ ಪ್ರದೇಶಕ್ಕೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬೆಳಗಾವಿ ವಿಭಾಗದ ಗೋಕಾಕ್ ಡಿಪೋ ದಿನಾಂಕ 31-8-1995ಕ್ಕೆ ಸರಿಯಾಗಿ 93 ವಾಹನಗಳನ್ನು ಹೊಂದಿದೆ.

ಆ) ಈ ವಾಹನಗಳಲ್ಲಿ 90 ವಾಹನಗಳು ಮಾರ್ಗದ ಮೇಲೆ ಓಡುತ್ತಿದ್ದು 3 ವಾಹನಗಳು ದುರಸ್ತಿಯಲ್ಲಿವೆ.

ಇ) ಈ ಹಳ್ಳಿಗಳಿಗೆ ವಾಹನ ಯೋಗ್ಯ ರಸ್ತೆಗಳಿಲ್ಲದಿರುವುದರಿಂದ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿರುವುದಿಲ್ಲ.

ಈ) ಗಡ, ಗುಜಾಳ ಮತ್ತು ಕಡಬಗಟ್ಟಿ ಹಳ್ಳಿಗಳಿಗೆ ಆಗಸ್ಟ್ 1995ರಲ್ಲಿ ವಾಹನ ಯೋಗ್ಯ ರಸ್ತೆಗಳನ್ನು ನಿರ್ಮಿಸಲಾಗಿದೆ. ಈ ಹಳ್ಳಿಗಳಿಗೆ ಸಾರಿಗೆ ಸೌಕರ್ಯ